

ಮಾತಾಡಿದರೆ, ದೆವ್ವ ಬರುತ್ತಂತೆ. ಮುಟ್ಟಾದವರು ಗಿಡಗಳನ್ನ ಮುಟ್ಟಿದರೆ ಸುಟ್ಟುಹೋಗುತ್ತವಂತೆ. ರಕ್ತ ನೋಡಿದರೆ ಕಣ್ಣು ಹೋಗ್ತಾವಂತೆ' – ಹೀಗೆ ಅನೇಕ ವಿಚಾರಗಳನ್ನ ಚರ್ಚೆ ಮಾಡುತ್ತಿದ್ದರು. ಆ ಮಾತುಗಳನ್ನು ಕೇಳಿ ಪ್ರಶ್ನೆಗಳು ಹುಟ್ಟುವುದರ ಜೊತೆಗೆ ಖುಷಿಯೂ ಆಗುತ್ತಿತ್ತು. ನಮಗೆ ಯಾರನ್ನಾದರೂ ಸುಡುವಷ್ಟು, ನಮ್ಮಲ್ಲಿಗೆ ದೆವ್ವ ಬರುವಷ್ಟು ಶಕ್ತಿ ನಮಗಿದೆಯೇ ಎನ್ನಿಸುತ್ತಿತ್ತು. 'ಅಂಥ ಶಕ್ತಿ ಇದ್ದಿದ್ದರೆ, ನಾನು ಯಾರನ್ನು ಬೇಕಾದರೂ ಸುಟ್ಟು ಹಾಕಬಹುದಿತ್ತು, ನನ್ನ ಜೊತೆ ಯಾರು ಜಗಳ ಮಾಡುವವರೋ ಅವರ ಮೇಲೆ ಆ ಶಕ್ತಿಯನ್ನ ಉಪಯೋಗಿಸಬಹುದಿತ್ತು' ಎಂದು ಒಳಗೊಳಗೇ ಜಂಬ.

ಒಂದು ದಿನ ಅಜ್ಜಿಯನ್ನ ಕೇಳಿದೆ: 'ಅವರೆಲ್ಲಾ ಮಾತಾಡಿಕೊಳ್ಳೋದು ನಿಜವಾ? ನನಗೂ ಆ ಶಕ್ತಿ ಕೊಡು'. ಅಜ್ಜಿ ನಗುತ್ತಾ ಹೇಳಿದಳು, 'ನಮಗೆ ಆ ಶಕ್ತಿ ಇದ್ದಿದ್ದರೆ ಈ ಭೂಮಿ ಮೇಲೆ ಜನಗಳು ಇರುತ್ತಿದ್ದರಾ? ನಮ್ಮನ್ನ ಮುಟ್ಟಲ್ಲ ಅಂತ ಯಾರು ದೂರ ಇಡುತ್ತಿದ್ದರೋ ಅಂತಹವರನ್ನ ಸುಟ್ಟು ಹಾಕಿಬಿಡುತ್ತಿದ್ದರು. ಆದರೂ ನಾವು ಹೆಣ್ಣುಮಕ್ಕಳು ಕಣೆ, ಹಂಗೆಲ್ಲಾ ಯಾರನ್ನೂ ಸಾಯಿಸುವುದಿಲ್ಲ. ಯಾಕೆ ಹೇಳು, ಒಂದು ಜೀವಕ್ಕೆ ಜೀವ ಕೊಟ್ಟು ಹೆರುವ ಶಕ್ತಿ ಇರುವವಳು ಎಂದಿಗೂ ಯಾರನ್ನೂ ಕೊಲ್ಲಲಾರಳು. ಅದೆಲ್ಲ ಇರಲಿ ಬಿಡು, ಈ ಮುಟ್ಟು ಎನ್ನುವುದು ಹಂಗೆ ಬಂತು ಅಂತ ಹೇಳ್ತೀನಿ ಬಾ, ಕೇಳು' ಎನ್ನುತ್ತಾ ಎಲೆ–ಅಡಿಕೆ ಜಜ್ಜುತ್ತಾ ಹೇಳೋಕೆ ಶುರು ಮಾಡಿದಳು. ಆಗ ಅಲ್ಲಿ ಕೂತುಕೊಂಡು ಕೌದಿ ಹೊಲಿಯುವವರೂ ಕೇಳುತ್ತಿದ್ದರು.

"ಒಂದು ಊರಲ್ಲಿ ಒಬ್ಬ ದೇವತೆ ಇದ್ದಳಂತೆ. ಅವಳಿಗೆ ಮಹಾ ಶಕ್ತಿ ಇತ್ತಂತೆ. ಏನು ವರ ಕೇಳಿದರೂ ಅವಳು ಕೊಡ್ತಿದ್ದಳಂತೆ. ಈ ಸುದ್ದಿ ಇಡೀ ಊರಿಗೆಲ್ಲ ಗೊತ್ತಾಯಿತಂತೆ. ಒಂದು ದಿನ ಒಂದು ಮಗುವಿಗೆ ಮೈ ತುಂಬಾ ಗುಳ್ಳೆಗಳು ಇದ್ದವಂತೆ. ಆ ಗುಳ್ಳೆಗಳಿಂದ ಅವಳಿಗೆ ಬಹಳ ಉರಿ ಉರಿ ಆಗ್ತಿತ್ತಂತೆ. ಅಷ್ಟರಲ್ಲಿ ಯಾರೋ ಒಬ್ಬರು ಬಂದು ಈ ದೇವತೆ ಬಗ್ಗೆ ಹೇಳಿದರಂತೆ. ಆಗ ಅವರು ಬಹಳ ಕಷ್ಟಪಟ್ಟು ಬಹಳ ದೂರದಿಂದ ನಡೆದುಕೊಂಡು ಬಂದು ದೇವಿಯ ಸನ್ನಿಧಿಗೆ ಬಂದು ಬೇಡಿಕೊಳ್ಳುತ್ತಾರಂತೆ. ಆಗ ಆ ದೇವತೆ 'ಮುಟ್ಟು' ಅಂದಳಂತೆ. ಆಗ ಅವರಿಗೆ ಭಯ ಆಯಿತಂತೆ. ಯಾಕೆಂದರೆ, ಆ ಹೆಂಗಸಿನ ಯೋನಿಯೊಳಗಡೆಯಿಂದ ರಕ್ತ ಬರುತ್ತಿತ್ತಂತೆ. ಆ ಭಯದಿಂದ ಅರ್ಥವಾಗದೆ, 'ಮುಟ್ಟಮ್ಮ' ಅಂತ ಮತ್ತೊಮ್ಮೆ ದೇವತೆ ಹೇಳಿದರೂ ಮುಟ್ಟಲಿಲ್ಲವಂತೆ. ಏನು ಮಾಡೋದು ಅಂತ ತಲೆ ಕೆರೆದುಕೊಳ್ಳುವಾಗ, ಯಾರೋ ಬಂದು ಮನಸ್ಸಿನಲ್ಲಿ ಹೇಳಿದಂಗೆ ಆಗಿ, ಏನು ಶಾಪ ಕೊಡ್ತಾರೋ ಏನೋ, ಹೆದರುತ್ತಲೇ, ಆ ದೇವತೆಯನ್ನ ಮುಟ್ಟಿದಳಂತೆ. ಆಗ ಅವಳ ಮೈಯಲ್ಲಿದ್ದ ಗುಳ್ಳೆಯೆಲ್ಲಾ ಹೋಯಿತಂತೆ. ಅಗಿನಿಂದ ಆ ಜಾಗಕ್ಕೆ ಯಾರಾದರೂ ಬರಲಿ, ಅವರ ಯೋನಿ ಭಾಗದಿಂದ ರಕ್ತ ಬರಲಿ, ಬಿಡಲಿ, ಆ ದೇವತೆಯನ್ನ ಮುಟ್ಟಿಸಿಯೇ ಮಾತಾಡಿಸಬೇಕು ಎಂಬ ಪದ್ಧತಿ ಬೆಳೆಯುತ್ತಾ ಬಂತಂತೆ. ಹಾಗೆ ಮುಟ್ಟಿದರೆ ಎಲ್ಲಾ ರೋಗಗಳು ಮಾಯವಾಗುತ್ತವೆ ಎಂಬ ನಂಬಿಕೆಯೊಂದಿಗೆ ಜಾರಿಯಲ್ಲಿದ್ದ ಈ ಪದ್ಧತಿ ಕಾಲಕ್ರಮೇಣ ಅದು ಮುಟ್ಟಬೇಕು ಎಂಬ ಅಂತ ಅರ್ಥ ಹೋಗಿ, ಹೆಣ್ಣುಮಕ್ಕಳು ಮುಟ್ಟಬಾರದು ಎಂಬ ಪದ್ಧತಿ ಬೆಳೆದು ಬಂದುಬಿಟ್ಟಿತಂತೆ. ಅದೂ ಮುಟ್ಟಾದ ಹೆಣ್ಣುಮಕ್ಕಳನ್ನ ಮುಟ್ಟಬಾರದು ಎಂದು ಬೆಳೆದುಬಿಟ್ಟಿದೆಯಂತೆ".

ಅಜ್ಜಿಯ ಕಥೆ ಕೇಳಿ ಸೋಜಿಗ ಅನಿಸಿತು. ಈಗ ನನಗೆ ಮದುವೆಯಾಗಿ ಮಕ್ಕಳಾಗಿ ಮೊಮ್ಮಕ್ಕಳೂ ಇದ್ದಾರೆ. ಇಂದಿಗೂ ಆ ಪದ್ಧತಿ ಹಾಗೇ ಇದೆಯಲ್ಲ? ಇದರಿಂದ ನಮ್ಮ ಯುವತಿಯರಿಗೆ, ಹೆಣ್ಣುಮಕ್ಕಳಿಗೆ ಅವಮಾನ ತಪ್ಪಿದ್ದಲ್ಲ. ಇನ್ನಾದರೂ ನಾವು ಎಚ್ಚೆತ್ತುಕೊಂಡು ಮುಟ್ಟಿನ ಬಗ್ಗೆ ಮೌನ ಮುರಿದು, ಮುಕ್ತವಾಗಿ ಮಾತನಾಡಲೇಬೇಕು...

***

ತನ್ನ ಅನುಭವ ಹಂಚಿಕೊಳ್ಳುವಾಗ ಸುನೀತಾ ಒಂದೇ ಸಮನೆ ಮಾತನಾಡುತ್ತಿದ್ದಳು. ಅವಳ ಮಾತುಗಳಲ್ಲಿ ನಿರಾಶೆಯ ಭಾವ ಹೆಚ್ಚಾಗಿತ್ತು.

ಮುಟ್ಟಿನ ವಿಚಾರವನ್ನು ಯಾವ ಮತ್ತು ಯಾರ ಉದ್ದೇಶಕ್ಕಾಗಿ ಗುಟ್ಟಾಗಿಟ್ಟಿದ್ದೇವೆ, ಯಾವ ಪ್ರಶ್ನೆಯನ್ನೂ ಕೇಳದೆ ಪಾಲಿಸುತ್ತಿದ್ದೇವೆ ಎನ್ನುವುದನ್ನು ನಾವು ಯೋಚಿಸಬೇಕಾಗಿದೆ. ಆ ಬಗ್ಗೆ ಮಕ್ಕಳ ಜೊತೆ, ಮನೆಯವರ ಜೊತೆ ಮುಕ್ತ ಚರ್ಚೆಗೆ ಮನಸ್ಸು ಮಾಡಬೇಕಾಗಿದೆ. ಯಾಕಾಗಿ, ಯಾರಿಗಾಗಿ ಈ ಮುಚ್ಚುಮರೆ?

ಟಿ.ವಿ.ಯಲ್ಲಿನ 'ವಿಸ್ಪರ್' ಜಾಹೀರಾತೊಂದರಲ್ಲಿ ನೀಲಿ ಲಿಕ್ವಿಡ್ ತೋರಿಸುತ್ತಾರೆ. ಹೀಗೆ ತೋರಿಸುವ ಮೂಲಕ ಜನರನ್ನು ಮೂರ್ಖರನ್ನಾಗಿಸುವುದಲ್ಲದೆ, ಮಕ್ಕಳ ಮನಸ್ಸಿನಲ್ಲಿ ಅದುವೇ ಸತ್ಯ ಎಂದು ನಂಬಿಸುತ್ತಿರುವ ಜಾಹೀರಾತಿನ ಬಗ್ಗೆ ನಮಗೆ ಪ್ರಶ್ನೆ ಮೂಡಬೇಕಾಗಿದೆ. ಸಿನಿಮಾಗಳಲ್ಲಿ ಅಥವಾ ನಿಜ ಜೀವನದಲ್ಲಿ ಅಪಘಾತ ಆದಾಗ ದೇಹದಿಂದ ಹೊರಬರುವ ರಕ್ತದ ಬಣ್ಣ ಕೆಂಪಾಗಿರುತ್ತದೆ. ಆದರೆ ಒಂದು ಹುಡುಗಿ ಋತುಮತಿಯಾದರೆ, ಉಂಟಾಗುವ ರಕ್ತಸ್ರಾವದ ಬಣ್ಣವೂ ಕೆಂಪಾಗಿಯೇ ಇರುತ್ತೆ ಅಂತ ಹೇಳೋಕೆ ನಮಗೆ ಆಗುತ್ತಿಲ್ಲ, ಆ ಬಣ್ಣ ತೋರಿಸೋಕೂ ಆಗುತ್ತಿಲ್ಲ. ಇಂತಹ ವ್ಯವಸ್ಥೆಯಲ್ಲಿ ಜೀವಿಸುತ್ತಿದ್ದೇವೆ.

ಈಗಲಾದರೂ ನಾವು ಮೌನ ಮುರಿದು ಮಾತನಾಡಲೇಬೇಕಾಗಿದೆ. ಅದಕ್ಕೆ ಮಾಡಬೇಕಿರುವುದು ಇಷ್ಟೇ: ಮಾತನಾಡುವುದು, ಚರ್ಚಿಸುವುದು, ಪ್ರಶ್ನಿಸುವುದು, ಸ್ವಂತವಾಗಿ ವಿವೇಚಿಸಿ ನಿರ್ಧರಿಸುವುದು. ನಿಮಗೇನನಿಸುತ್ತೆ... ನೀವೇ ನಿರ್ಧರಿಸಿ. ■

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in